# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/114/2015-16 ದಿನಾಂಕ:27.07.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಕೆ.ಕೋಟೆಪ್ಪ ತಂದೆ ಭೂಕಾಂತಪ್ಪ<br>ಗ್ರಾಮ:-ಅಂಬಳಿ ತಾ:-ಹೆಚ್.ಬಿ.ಹಳ್ಳಿ | ಕೆ.ನೀಲಪ್ಪ ತಂದೆ ಭೂಕಾಂತಪ್ಪ<br>ಗ್ರಾಮ:-ಅಂಬಳಿ ತಾ:-ಹೆಚ್.ಬಿ.ಹಳ್ಳಿ |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಅಂಬಳಿ | 78/ಎ1 | 2-70 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಅಂಬಳಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಅಂಬಳಿ ಗ್ರಾಮದ ನಿವಾಸಿಯಾದ ಕೆ.ಕೋಟೆಪ್ಪ ತಂದೆ ಭೂಕಾಂತಪ್ಪ ಇವರು ನೋಂದಾಯಿತ ದಾನ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-04459-2015-16 ದಿನಾಂಕ:16.03.2016 ರಂದು ನೋಂದಣಿಯಾಗಿರುತ್ತದೆ. ಗ್ರಾಮದಲ್ಲಿ ನಮೂನೆ-21ರ ನೋಟೀಸನ್ನು ದಿನಾಂಕ:17.03.2016 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:11.04.2016 ರಂದು ಕೆ.ನೀಲಪ್ಪ ತಂದೆ ಭೂಕಾಂತಪ್ಪ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.44/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:19.05.2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:19.05.2016 ರಿಂದ13.07.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಉಭಯರು ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ಹೇಳುವಂತೆ; ಸದರಿ ಜಮೀನಿನಲ್ಲಿ ವಿಸ್ತೀರ್ಣ 1-00 ಎಕರೆ ಜಮೀನು ನನಗೆ ಬರಬೇಕೆಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಅರ್ಜಿದಾರರು ಹಾಜರಾಗಿ ಹೇಳುವಂತೆ; ನೋಂದಾಯಿತ ದಾನ ಪ್ರಕಾರ ನನ್ನ ಹೆಸರಿಗೆ ಹಕ್ಕುಬದಲಾವಣೆಯನ್ನು ಮಾಡಲು ಕೋರಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆಮಾಡಲಾಗಿ, ನೋಂದಾಯಿತ ದಾನ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-04459-2015-2016 ದಿನಾಂಕ:16.03.2016 ರಂದು ಪಟ್ಟಾದಾರರಾದ ಕುರುಬರ ಭೂಕಾಂತಪ್ಪ ತಂದೆ ಭರಮಪ್ಪ ಇವರು ಕೆ.ಕೋಟೆಪ್ಪ ತಂದೆ ಭೂಕಾಂತಪ್ಪ ಇವರಿಗೆ ದಾನಕ್ಕೆ ನೋಂದಣಿ ಮಾಡಿಸಿರುತ್ತಾರೆ. ಪ್ರಯುಕ್ತ, ಅರ್ಜಿದಾರರ ಹೆಸರಿಗೆ ನೋಂದಾಯಿತ ದಾನ ಪ್ರಕಾರ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಹಾಗೂ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129 ರನ್ವಯ ಮತ್ತು ಎಂ.ಆರ್.ನಂ.44/2015-16 ರ ಪ್ರಕಾರ, ಅಂಬಳಿ ಗ್ರಾಮದ ಸ.ನಂ. 78/ಎ1 ವಿಸ್ತೀರ್ಣ 2-70 ಎಕರೆ ಜಮೀನು ಕೆ.ಕೋಟೆಪ್ಪ ತಂದೆ ಭೂಕಾಂತಪ್ಪ ಇವರ ಹೆಸರಿಗೆ ನೋಂದಾಯಿತ ದಾನ ಪ್ರಕಾರ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:27.07.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

27/7/16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,ಕೋಗಳಿ

ಉಪ ತಹಶೀಲ್ದಾರರು,
ನಾಡ ಕಛೇರಿ, ಕೋಗಳಿ

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಶುದ್ಧಪ್ರತಿ ಕಡತಕ್ಕೆ.

19/8/16